ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು – 12.

ಸಂಖ್ಯೆ : ಪಪೂಶಿ/ಪರೀಕ್ಷೆ/2nd PUC O.P/2019-20 ದಿನಾಂಕ: 09.12.2019

**ಸುತ್ತೋಲೆ**

ವಿಷಯ: ಮಾರ್ಚ್ 2020ರ ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಹೊಸ (Freshers) ವಿದ್ಯಾರ್ಥಿಗಳ ಮಾಹಿತಿಗಳನ್ನು PUC Online Portal ನಲ್ಲಿ ಸರಿಪಡಿಸುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2019-20ನೇ ಸಾಲಿನಲ್ಲಿ ದ್ವಿತೀಯ ಪಿಯುಸಿಯನ್ನು ಅಭ್ಯಾಸ ಮಾಡುತ್ತಿರುವ ಹೊಸ **(Freshers)** ವಿದ್ಯಾರ್ಥಿಗಳ ಮಾಹಿತಿಗಳನ್ನು ಈಗಾಗಲೇ SATS Portal ನಲ್ಲಿ ಪ್ರತಿಯೊಂದು ಕಾಲೇಜಿನವರು ತಮ್ಮ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಗಳನ್ನು Upload ಮಾಡಿದ್ದು, ಅದರಂತೆ ದಿನಾಂಕ 16.12.2019ರ ನಂತರ ಕರಡು ಪ್ರವೇಶಪತ್ರಗಳನ್ನು PUC Online Portal ನಲ್ಲಿ ಸಂಬಂಧಿಸಿದ ಕಾಲೇಜುಗಳಿಗೆ ಬಿಡುಗಡೆಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. (ಈಗಾಗಲೇ ಮಾಹಿತಿಯನ್ನು SATS Portal ನಿಂದ PUC Online Portal ಗೆ ವರ್ಗಾಯಿಸಲಾಗಿದೆ). ಇದಕ್ಕೆ ಸಂಬಂಧಿಸಿದಂತೆ Upload ಮಾಡಿರುವ ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ದಿನಾಂಕ **11.12.2019 ರಿಂದ 13.12.2019** ರೊಳಗಾಗಿ ವ್ಯತ್ಯಾಸವಿರುವ ವಿದ್ಯಾರ್ಥಿಗಳ ಮಾಹಿತಿಗಳ ಮೂಲ ದಾಖಲೆಗಳೊಂದಿಗೆ **(Original SSLC Marks Card, TC, Admission Register, I PU Result list / Sheet approved by DD PUE)** ಇತ್ಯಾದಿಗಳೊಂದಿಗೆ ಹಾಗೂ ಪ್ರಾಂಶುಪಾಲರಿಂದ ದೃಢೀಕರಿಸಿದ ಒಂದು Set Xerox ಪ್ರತಿಗಳನ್ನು ವ್ಯತ್ಯಾಸವಿರುವ ಬಗ್ಗೆ ಪ್ರಾಂಶುಪಾಲರ ಮನವಿ ಪತ್ರದೊಂದಿಗೆ ಕೇಂದ್ರ ಕಛೇರಿಯ ಎರಡನೇ ಮಹಡಿಯಲ್ಲಿರುವ **ಗಣಕಶಾಖೆಗೆ** (Computer Section) ಖುದ್ದಾಗಿ ಸಲ್ಲಿಸಿ ತಿದ್ದುಪಡಿ ಮಾಡಿಸಲು ಕ್ರಮಕೈಗೊಳ್ಳುವಂತೆ ಈ ಮೂಲಕ ಸೂಚಿಸಲಾಗಿದೆ. ಯಾವುದೇ ಕಾರಣಕ್ಕೂ ಅಂಚೆ ಮೂಲಕ ಬಂದ ಪ್ರಸ್ತಾವನೆಗಳನ್ನು ಸ್ವೀಕರಿಸಿ ತಿದ್ದುಪಡಿ ಮಾಡಲಾಗುವುದಿಲ್ಲ.

SATS Portal ನ್ನು ಈಗಾಗಲೇ ಸ್ಥಗಿತ ಮಾಡಲಾಗಿದ್ದು, ವಿದ್ಯಾರ್ಥಿಗಳ ಮಾಹಿತಿಗಳನ್ನು PUC Online Portal ನಲ್ಲಿ checklistನ್ನು ವೀಕ್ಷಿಸಬಹುದಾಗಿದ್ದು, ಯಾವುದೇ Edit / Delete option ಇರುವುದಿಲ್ಲ. ವೀಕ್ಷಣೆಯ ನಂತರ ವಿದ್ಯಾರ್ಥಿಗಳ **ಫೋಟೋ** ಬಿಟ್ಟುಹೋಗಿದ್ದಲ್ಲಿ ಅಥವಾ ಬದಲಿ ಫೋಟೋ ಅಳವಡಿಸಬೇಕಿದ್ದಲ್ಲಿ PUC Online Portal ನಲ್ಲಿ **ಅಳವಡಿಸಬಹುದು**. ವಿದ್ಯಾರ್ಥಿಯ ಹೆಸರು, ತಂದೆ / ತಾಯಿಯ ಹೆಸರು, ಭಾಷೆ, ಐಚ್ಛಿಕ ವಿಷಯಗಳು, ಕಾಲೇಜು **ಬದಲಾವಣೆ**, Break admission, Direct admission, Examination Fees updation, NAD, SAT, FNP, ಇತ್ಯಾದಿಗಳನ್ನು ಪರಿಶೀಲಿಸಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ಮೇಲೆ ಸೂಚಿಸಿರುವಂತೆ **ದಿನಾಂಕ** 13.12.2019 ರೊಳಗೆ ಕೇಂದ್ರ ಕಛೇರಿಯ **ಗಣಕಶಾಖೆಗೆ** ಖುದ್ದು ಹಾಜರಾಗಿ ಸರಿಪಡಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

ಮೇಲ್ಕಂಡ ಎಲ್ಲಾ ತಿದ್ದುಪಡಿಗಳನ್ನು ದಿನಾಂಕ: 13.12.2019 ರೊಳಗೆ ಅಂತಿಮಗೊಳಿಸಿ ದಿನಾಂಕ 16.12.2019ರ ನಂತರ ಕರಡು ಪ್ರವೇಶ ಪತ್ರಗಳನ್ನು (Draft Copy of Admission Tickets) PUC Online Portal ನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು.

**<u>ವಿಶೇಷ ಸೂಚನೆ</u>: ವಿದ್ಯಾರ್ಥಿಗಳ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸಗಳಿದ್ದರೆ ಸರಿಪಡಿಸಿಕೊಳ್ಳಲು ಇದು ಕೊನೆಯ ಅವಕಾಶವಾಗಿರುತ್ತದೆ.**

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ